ತಾರೀಖು 12ನೆ ಜುಲೈ 1907.

ನಂ. ಫೈ. 132—ಎಸ್. ಆರ್. 3-07—4, 1907ನೆ ಇಸವಿಯ ಜುಲೈ 3ನೆ ತಾರೀಖಿನ ಪೂರ್ವಾಹ್ನದಲ್ಲಿ ಮಿ|| ಎಚ್. ಎಚ್. ಸ್ಪಾರ್ಕ್ಸ್‌ರವರು ಮಿ|| ಪಿ. ಎಸ್. ಪೂರ್ಣಯ್ಯನವರಿಂದ ಮೈಸೂರು ಎಕ್ಸ್‌ಪ್ರೆಸ್ ಕಮಿಷನರ ಉದ್ಯೋಗದ ಚಾರ್ಜನ್ನು ವಹಿಸಿದರು.

ತಾರೀಖು 12ನೆ ಜುಲೈ 1907.

ನಂ. ಫೈ. 133—ಜಿ. ಎಫ್. 2-07—2, ಅಸಿಸ್ಟೆಂಟ್ ಕಂಟ್ರೋಲರ್ ಮಿ|| ಟಿ. ಸತ್ಯರಾಜಪ್ಪರಿಗೆ 1907ನೆ ಇಸವಿಯ ಜೂನ್ 19ನೆ ತಾರೀಖಿನಿಂದ 8 ದಿನಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿತು.

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ತಾರೀಖು 16ನೆ ಜುಲೈ 1907.

ನಂ. 1—ಎಲ್. ಸಿ. 1907ನೆ ಇಸವಿಯ ಜುಲೈ 24ನೆ ತಾರೀಖು ಬುಧವಾರ ಅಪರಾಹ್ನ 3 ಘಂಟೆಗೆ ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡದಲ್ಲಿ ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಮತ್ತು ನ್ಯಾಯವಿಧಾಯಕ ಸಭೆಯ ಒಂದು ಸಮಾಗಮವು ನಡೆಸಲ್ಪಡುವುದು.

ಅವ್ಯಾಜೆಯ ಮೇರೆಗೆ,
ಕೆ. ಮೈಲಾರಿರಾವ್,
ಮೈಸೂರು ನ್ಯಾಯವಿಧಾಯಕ ಸಭೆಯ ಸೆಕ್ರೆಟರಿ.

ಮಿಲಿಟರಿ.

ಇನ್ಸ್ಟ್ರಕ್ಷನ್ಸ್.

ತಾರೀಖು 17ನೆ ಜುಲೈ 1907.

ನಂ. 168-70, ಮೈಸೂರು ಸೀಮೆಯ ಘನವನ್ನೆಲ್ಲಿದ ಶ್ರೀಮಂತ ಮಹಾರಾಜರವರು ಮೈಸೂರು 2ನೆ ಪೈದಲ್ ಪಟಾಲಮಿನಲ್ಲಿ ಈ ಕೆಳಗೆ ಕಂಡ ಖಡ್ತಿಗಳನ್ನು ನಮೂದಿಸಿರುವ ತಾರೀಖುಗಳ ಲಾಗಾಯಿತು ಮಂಜೂರ್ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ	ಯಾವ ದರ್ಜೆಗೆ.	ಯಾವ ತಾರೀಖು ಲಾಗಾಯಿತು.
ಮಹಮ್ಮದ್ ಅಬ್ದುಸ್.	ಜವಾದ್ದಾರ್, 1ನೆ ಗ್ರೇಡ್	ಸುಬ್ದೇದ್ದಾರ್, 2ನೆ ಗ್ರೇಡ್	ಫೆಬ್ರವರಿ 15—1907
ಮಹಮ್ಮದ್ ಇಡ್ರೂಸ್.	ರೆಜಿಮೆಂಟಲ್ ಹವಿಲ್ದಾರ್ ಮೇಜರ್.	ಜವಾದ್ದಾರ್, 2ನೆ ಗ್ರೇಡ್ ...	ಜುಲೈ 11—1907

ಹುಕುಂ ಬಮೋಜೀಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಅಸಿಸ್ಟೆಂಟ್.

ಪಬ್ಲಿಕ್ ವರ್ಕ್ಸ್.

ಇನ್ಸ್ಟ್ರಕ್ಷನ್ಸ್.

ತಾರೀಖು 11ನೆ ಜುಲೈ 1907.

ಇದರಡಿ ಕಂಡ ವರ್ಗವನ್ನು ಹುಕುಂ ಮಾಡಲ್ಪಟ್ಟಿದೆ.

ನಂ. 626—4953, ಅಸಿಸ್ಟೆಂಟು ಇಂಜಿನಿಯರ್ ಮೆ|| ಕೆ. ಎಸ್. ನವರತ್ನ, ಎಲ್. ಸಿ. ಇ., ಯವರನ್ನು ತುಮಕೂರು ಡಿವಿಜನ್‌ನಿಂದ ಕಡೂರು ಡಿವಿಜನ್‌ಗೆ ವರ್ಗ ಮಾಡಲ್ಪಟ್ಟಿದೆ.

ತಾರೀಖು 16ನೆ ಜುಲೈ 1907.

ನಂ. 643-5068, ಪ್ಯಾಲಿಸ್ ಡಿವೀಜನ್‌ಗೆ ಸೇರಿದ ಅಸಿಸ್ಟೆಂಟು ಇಂಜಿನಿಯರ್ ಮೆ|| ಟಿ. ಎಸ್. ಕೇಷವಾಯ್ಯಂಗಾರ್, ಬಿ. ಸಿ. ಇ., ಯವರಿಗೆ ಈ ಆಫೀಸಿನ ಸನ್ 1907ನೆ ಏಪ್ರಿಲ್ 8ನೆ ತಾರೀಖು 306—2505ನೆ ನಂಬರ್ ಇನ್ಸ್ಟ್ರಕ್ಷನ್ಸಿಯಲ್ಲಿ ಜನವರಿ 3ನೆ ತಾರೀಖಿನಿಂದ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಟ್ಟಿದ್ದ 6 ತಿಂಗಳು ರಜವನ್ನು ಇನ್ನೂ 2 ತಿಂಗಳು ಜಾಸ್ತಿ ಮಾಡಲ್ಪಟ್ಟಿದೆ.

ಹುಕುಂ ಬಮೋಜೀಬ್,
ಬರ್ನಾರ್ಡ್ ಥಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್, ಇಲಾಖಾ ಮೈಸೂರು ಗವರ್ನಮೆಂಟ್ ಅಂಡರ್ ಸೆಕ್ರೆಟರಿ.